Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿನಿಸ್ಟೇಡಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 183] ಶನಿವಾರ 14—4—45 [3 ಪೈ

ಯುದ್ಧ ವಾರ್ತೆ

ಜರ್ಮನಿ — ಅಮೇರಿಕ ಸೇನೆ ಎಲ್ಬ್ ನದಿ ದಾಟಿದೆ. ನ್ಯೂಂಬರ್ಗ್ ಜೆಸ್ಸೋ, ಯಾಂಡ್, ಫೋರ್ಟ್, ಸ್ವೆಫೋರ್ಟ್, ಸೀಗ್‌ಫ್ರೈಡ್ ಲೈನ್ಸಿನ ಎರಡು ಪಟ್ಟಣಗಳು ಮಿತ್ರ ಸೇನೆಗಳ ವಶವಾಯಿತು. ಬ್ರಿಟೀಷ್ ಸೇನೆಗಳು ಅಲೋ ನದಿಯನ್ನು ದಾಟಿದವು.

ಇಟಲಿ — ಕೆಸ್ಸಾರ ನಗರವನ್ನು ಬ್ರಿಟೀಷ್ ಸೇನೆ ಹಿಡಿಯಿತು.

ಲಂಡನ್ — ಹಿಮ್ಲರ್ ಮತ್ತು ಕೈಟಲ್‌ರವರುಗಳಿಂದ ರಾಜು ಮಾಡಲ್ಪಟ್ಟ ಒಂದು ಅಜ್ಞಾ ಪತ್ರವು ' ನಾಗರೀಕರುಗಳು ಸೈನಿಕರುಗಳನ್ನು ಶರಣಾಗತರಾಗಿರೆಂದು ಪೀಡಿಸಿದರೆ ಅವರುಗಳಿಗೆ ಘೋರ ಶಿಕ್ಷೆಯನ್ನು ವಿಧಿಸಲಾಗುವುದೆಂದೂ, ಈ ರೀತಿಯ ಸಡಿಲಿಕೆಗಳಿಗೆ ವಿರೋಧಿಸುವುದಕ್ಕೋಸ್ಕರವೇ ನಾಗರೀಕರಾಗಲೀ ಅವಕಾಶ ಕೊಡಬಾರದೆಂತೆ ಎಚ್ಚರಿಸುವುದಿಂದಲೂ ' ಜರ್ಮನ್ ಹೈಕಮ್ಯಾಂಡ್‌ಗಳ ಮೂಲಕ ಪ್ರಸಿದ್ಧಪಡಿಸಿರುವೆಂದು ಲಂಡನ್ನಿನ ವಾರ್ತೆ.

ವಿಯನ್ನಾದಲ್ಲಿರುವ ಜರ್ಮನರಿಗೆ ಪ್ರಾಣ ಸಂಕಟವೊದಗಿದೆಯೆಂದು, ಓಡಿಹೋಗಲು ಸಹ ಮಾರ್ಗವೇ ಇಲ್ಲವಾಗಿದೆಯೆಂದೂ ಲಂಡನ್ನಿನ ಸುದ್ದಿ ತಿಳಿಸುತ್ತದೆ.

ಂ ಂ

ನಿರ್ಧರಿಸಿದ್ದ ಕಾರ್ಯಕ್ರಮದಂತೆ ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನ ನಡೆಯುವುದಾಗಿ ತಿಳಿದುಬಂದಿದೆ.

ಂ ಂ

ರೂಸ್ವೆಲ್ಟರ ನಿಧನದ ಪ್ರಯುಕ್ತ ಉಪಾಧ್ಯಕ್ಷ ಮಿ. ಹ್ಯಾರಿ ಟ್ರೂಮನ್‌ರು ಅಮೇರಿಕದ ಅಧ್ಯಕ್ಷರಾದರು.

ಂ ಂ

ರೂಸ್ವೆಲ್ಟರ ನಿಧನದ ಬಗ್ಗೆ ಬ್ರಿಟೀಷ್ ಸಾರ್ವಭೌಮರು ತಮ್ಮ ಸಂತಾಪವನ್ನು ಸೂಚಿಸಿದರು.

ಂ ಂ

ಮಾಣಿಕಚಂದ್ ಮೋತೀಚಂದ್ ರಾಠಾದಾರವಾಜ್ಯ ಎಂಬುವರಿಗೆ 33 ವರ್ಷಗಳ ಹಿಂದೆ ಗಿರಿಧಿ ಎಂಬಲ್ಲಿ ಮೋಸ್ಟ್ ಮಾಡಿದ ಕಾಗದವು ಮಾರ್ಚ್ 19 ನೇ ತಾರೀಖಿನ ದಿನ ಮೆಲ್ಬಿಳಾಸದವನ ಮೊಮ್ಮಗನಿಗೆ ಕೊಡಲಾಯಿತಂತೆ. ಈ ಕಾಗದದ ವಿಳಾಸದಾರನು ಎಂದೋ ಸತ್ತುಹೋಗಿದ್ದನಂತೆ.

ಪ್ರೆ || ರೂಸ್ವೆಲರು ಕ್ಷಣರೆಯಾದರು
ವೆ ಎ ಲ್ರ

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟ್ ಫ್ರಾಂಕ್ಲಿನ್ ಡಿಲಾನೋ ರೂಸ್ವೆಲ್ಟರು ನೊನ್ನೆ ಗುರುವಾರ ಮಧ್ಯಾಸ್ನ ತಮ್ಮ 63 ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಇವರು 1882 ನೇ ಜನವರಿ 30 ರಲ್ಲಿ ನ್ಯೂಯಾರ್ಕಿನ ಹೈಡ್‌ಪಾರ್ಕಿನಲ್ಲಿ ಜನಿಸಿದರು. 1649 ರಲ್ಲಿ ಇವರ ಮೂಲ ಪುರುಷರು ಡೆನ್ಮಾರ್ಕಿನಿಂದ ಬಂದು ನೆಲಸಿದರು. ಇವರ ತಾಯಿಯ ಹೆಸರು ಡಿಲಾನೊ. ಮಾಜಿ ಪ್ರೆಸಿಡೆಂಟ್ ರೂಸ್ವೆಲ್ಟರ ಸಂಭಂಧಿಕರು. 1904 ರಲ್ಲಿ ಬಿ. ಎ. ಮತ್ತು 1907 ರಲ್ಲಿ ಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. 1910 ರಲ್ಲಿ ಡೆಮೋಕ್ರಾಟ್ ಪಾರ್ಟಿಯಿಂದ ಸೆನೆಟಿಗೆ ಚುನಾಯಿತರಾದರು. ಪ್ರೆಸಿಡೆಂಟ್ ವಿಲ್ಸನ್ನರಿಗೆ ಬಲ ಭುಜವಾಗಿದ್ದರು. 1912 ರಲ್ಲಿ ಅ || ಸೆಕ್ರಟರಿ ಇಲಾಖೆಯಲ್ಲೂ, 1919 ರಲ್ಲಿ ಸೇನೆ ಇಲಾಖೆಯಲ್ಲೂ ಇದ್ದು, 1920 ರಲ್ಲಿ ನಡೆದ ಉಪಾಧ್ಯಕ್ಷ ಚುನಾವಣೆಯಲ್ಲಿ ಪರಾಜಿತರಾದರು. ಪುನಃ ಲಾಯರಾದರು 1921 ರಲ್ಲಿ ಪಾರ್ಶ್ವವಾಯು ಪೀಡಿತರಾಗಿ ಬಲಗಾಲು ಏನೂ ಮಾಡಲಾರದ ಹಾಗಾಯಿತು. ಇಷ್ಟಾದರೂ ಇವರ ಮನಸ್ಸಿನ ಧೈರ್ಯ ಕುಂದಲಿಲ್ಲ. 1928 ರಲ್ಲೂ 1930 ರಲ್ಲೂ ಇವರು ನ್ಯೂಯಾರ್ಕಿನ ಗೌರ್ನರ್‌ರಾಗಿ ಚುನಾಯಿತರಾದರು. 1933 ರಿಂದ 1945 ರವರೆಗೆ ನಾಲ್ಕು ಭಾರಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದ್ದರು. ಯಾವ ಪ್ರೆಸಿಡೆಂಟರೂ ಎರಡಾವೃತ್ತಿಗಿಂದ ಹೆಚ್ಚಾಗಿ ಚುನಾಯಿತರಾಗಿರಲಿಲ್ಲ. ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೆಚ್ಚು. ನಿರಂಕುಶಾಧಿಕಾರ ತಪ್ಪೆಂದು ಇವರವಾದ ಬ್ರಿಟೀಷ್ ಜನರಲ್ಲಿ ಇವರಿಗೆ ಪ್ರೀತಿ ಹೆಚ್ಚು. ಯುದ್ಧಾರಂಭದಿಂದ ಬ್ರಿಟೀಷರಿಗೆ ನಾನಾ ರೀತಿಯಲ್ಲಿ ಸಹಾಯ ಮಾಡಿದರು.

1913 ರಲ್ಲಿ ರೂಸ್ವೆಲ್ಟರು ಸ್ಯೂಡೀಲ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರಿಂದ ಪ್ರಜೆಗಳು ದೇಶದ ಕ್ಷೀಭೆಗಳಿಂದ ಪಾರಾದರು. ಇದರಿಂದ ಮನೆ ಇಲ್ಲದವರಿಗೆ ಮನೆಯಾಯಿತು. ಕೂಲಿಗಾರರಿಗೆ ಕೂಲಿ ಬರುವಂತಾಯಿತು. ವ್ಯವಸಾಯಗಾರರಿಗೆ ನಾನಾ ರೀತಿಯಲ್ಲಿ ಸಹಾಯ ಮಾಡಿದರು. ಬ್ಯಾಂಕ್' ಮುಸೂದೆ ತಿದ್ದುಪಡಿಯಾಯಿತು. ಕೆಲಸವಿಲ್ಲದ ಹದಿನೇಳು ವಿಲಿಯನ್ ಜನರಲ್ಲಿ ಹತ್ತು ಮಿಲಿಯನ್ ಜನರಿಗೆ ಜೀವನವಾಯಿತು. ಇದರಿಂದ ಸರ್ಕಾರಕ್ಕೆ 150 0000000 ಡಾಲರ್ ವ್ಯಯವಾಯ್ತು.

ಇವರು ಮೊದಲಾವೃತ್ತಿ ಪ್ರೆಸಿಡೆಂಟರಾಗಿದ್ದಾಗ ದೇಶದಲ್ಲಿ ಅಶಾಂತಿ ಇದ್ದಿತು. ಜರ್ಮನಿ ಜಪಾನುಗಳು ಮೇಲೆ ಬೀಳುವುದೆಂದು ತಿಳಿದಿದ್ದರು. ಬಡವಿಲ್ಲದ ಬ್ಯಾಂಕುಗಳನ್ನು ಮುಚ್ಚಿಸಿದರು. ನಾನಾಬಗೆಯ ಕೆಲಸಗಳನ್ನು ಮಾಡಿಸಿ ಜನರ ಜೀವನೋಪಾಯ ಉತ್ಪಾದಿಸಿದರು. ಜನರ ಕಳವಳ ತಪ್ಪಿಸಿದರು. ಇಪ್ಪತ್ತೈದು ಲಕ್ಷ ಕೆಲಸವಿಲ್ಲದ ಬಾಲಕರ ಪಟಾಲಂ ನಿರ್ಮಿಸಿದ್ದರು. ಇವರಿಂದ ಯುದ್ಧಕ್ಕೆ ಅನುಕೂಲವಾಯಿತು. ಟೆನ್ನೆಸಿ ನೀರಾವರಿ ಕಾಮಗಾರಿ— ಇದು ಸೂರ್ಯ ಚಂದ್ರ ಇರುವವರೆಗೂ ಇವರ ಜ್ಞಾಪಕ ಮಾಡುವುದು. ಈ ನೀರಾವರಿಯು ಹದಿನೆಂಟು ಅಣೆ ಕಟ್ಟಿನಿಂದ ೬ ಕ್ಷಾನಲ್‌ಲಕ್ಷ ಎಕರೆ ತರೀ ಫಲವಾಗುತ್ತೆ. ಅರುನೂರೈವತ್ತು ಮೈಲಿ ನದಿಯಲ್ಲಿ ಹಡಗುಗಳು ಸರಾಗವಾಗಿ ಹೋಗಬಹುದು ಬಂಜರು ಭೂಮಿ ಫಲಪತ್ತಾಯಿತು. ವಿದ್ಯುಚ್ಛಕ್ತಿ ಉತ್ಪತ್ತಿಯಾಗಿ ಕೈಗಾರಿಕೆ ಹೆಚ್ಚಿತು. ರಸಾಯನಿಕ ಪದಾರ್ಥಗಳು ತಯಾರಾದವು ಸ್ವಪಂಚ ಶಾಂತಿಗಾಗಿ ಇವರು ಶ್ರಮಿಸುತ್ತಿದ್ದರು. ಆಡಂಬರ ಮಾಡಿದವರಲ್ಲ. ನಾಲ್ಕನೇ ಅವೃತ್ತಿ ಪ್ರೆಸಿಡೆಂಟ್ ಪ್ರಮಾಣ ವಚನ ತೆಗೆದುಕೊಂಡಾಗ ಹೂವ ಬಗೆಯ ಉತ್ಪವ ಮಾಡಬಾರದೆಂದು ಹೇಳಿದ್ದರು ಅವರ ಮೊತ್ತೈ ಪ್ರೇಮವು ಆದರ್ಶವಾಗಿದ್ದಿತು. ಅವರ ಶಾವಿಗಾಗಿ ಬಹಳ ವರುಗಿದರು ಅವರಿಗೆ ಸಮುದ್ರವೆಂದರೆ ಅನಂದ ಮೂರು ವರ್ಷದ ಮಗುವಿನಿಂದಲೇ ಸಮುದ್ರಯಾನ ಮಾಡುತ್ತಾ, ನೌಕಾ ವಿಷಯದಲ್ಲಿ ಪ್ರೌಢರೆನಿಸಿಕೊಂಡರು. ವಿದ್ಯಾರ್ಥಿಯಾಗಿದ್ದಾಗ ಅನೇಕ ಬಹುಮಾನಗಳು ದೊರೆತ್ತಿದ್ದವು. ಹಾರ್ವರ್ಡ ವಿಶ್ವವಿದ್ಯಾಸಲಯದ ದಿನ ಪತ್ರಿಕೆಯು ಎಡಿಟರಾಗಿದ್ದರು. ಇವರಿಗೆ ಡಾಕ್ಟರ್ ಆಫ್ ಲಾಸ್ ಎಂಬ ಪ್ರಶಸ್ತಿ ದೊರೆತ್ತಿತ್ತು. 1941 ರಲ್ಲಿ ಅಟ್ಲಾಂಟಿಕ್ ಛಾರ್ಟರಿಗೆ ರಾಜು ಮಾಡಿದ್ದರು. ಇವರಿಗೆ ಸತ್ತಿಯೂ 4 ಮಂದಿ ಪುತ್ರರೂ ಒರ್ವ ಪುತ್ರಿಯೂ ಇರುವರು.

ಬೆಂಕಿ ಅನಾಹುತ

ಲಾಹೋರು ಗೇಟಿನಲ್ಲಿ ರೈಲ್ವೇ ಗುಡ್ಸ್ ಷೆಡ್ಡಿನಲ್ಲಿ ಒಮ್ಮೆಲೇ ಬೆಂಕಿ ಹತ್ತಿ ವ್ಯಾಪಾರಸ್ಥರ ಎಷ್ಟೋ ವ್ಯಾಕೆಜುಗಳು ಮತ್ತು ಬಟ್ಟೆ ಮೂಟೆಗಳು ಪೂರ್ತಿ ಸುಟ್ಟು ಹೋಗಿವೆಯಂತೆ. ಸುಮಾರು 4 ಲಕ್ಷ ರೂ. ನಷ್ಟವಾಗಿರುವುದೆಂದು ಅಂದಾಜು ಮಾಡಲಾಗಿದೆ.

ಟೀಕಾತ್ಮಕ ಭಾಷಣಕ್ಕೆ ಬಂಧನ

ಸಿಂಧ್ ಸರಕಾರದವರು ಸತ್ಯಾರ್ಥ ಪ್ರಕಾಶದ ಮೇಲೆ ಮಾಡಿರುವ ನಿರ್ಬಂಧದ ಬಗ್ಗೆ ಟೀಕಾತ್ಮಕ ಭಾಷಣ ಮಾಡಿದರೆಂದು ಪ್ರಸಿದ್ಧ ಆರ್ಯ ಸಮಾಜದ ಬ್ರಹ್ಮಚಾರಿ ದತ್ತರೆಂಬವನ್ನು ಹೊಟ್ಟಿಕಿ ವಿಲೇಜ್ ಪೋಲೀಸಿನವರು ಬಂಧದಲ್ಲಿಟ್ಟಿದ್ದಾರೆ.

ಭಾರತ ವೈದ್ಯರು

ಇಟಲಿಯಲ್ಲಿ 9 ತಿಂಗಳು ಆವ ಯುದ್ಧದಲ್ಲಿ ಸುಮಾರು 12 ದೇಶದ 11000 ಮಂದಿ ಗಾಯಗೊಂಡವನ್ನು ಹಿಂದೀ ಡಾಕ್ಟರುಗಳು ಯೋಗ್ಯರೀತಿಯಲ್ಲಿ ಉಪಚರಿಸಿದರು.

ಪೌರಸಭೆ ವಿಶೇಷ ಮೀಟಿಂಗು

ಮೊನ್ನೆ ರಾಜಧಾನಿಯ ಪೌರಸಭೆಯ ವಿಶೇಷ ಮೀಟಿಂಗು ಶ್ರೀ ರಾಮಜಂದ ರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆದು, ಅಶಕ್ತ ಪೋಷಣಾಲಯವನ್ನು ಕೂಡಲೇ ರಾಜಧಾನಿಯಲ್ಲಿ ಸ್ಥಾಪಿಸಬೇಕೆಂದು ಸರ್ವಾನುಮತದಿಂದ ನಿರ್ಣಯವಾಯಿತು.



ಅಮೇರಿಕಾ ಸೈನಿಕರು ಜರ್ಮನ್ ಶಸ್ತ್ರಾಸ್ತ್ರ ವಾಹನವನ್ನು ಹಿಡಿಯುತ್ತಿರುವುದು.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

AT OPERA — From 12-4-45

POOMPAVAI

'ಪೂಂಪಾವೈ'

ಪಾತ್ರ - ರಾಮಸ್ವಾಮಿ, ಜೇವರತ್ನಂ, ಮಧುರಂ, ಕೃಷ್ಣ

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ನ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ.

ಅಲ್ಲದೆ ಪುಡಿ ಮತ್ತು ವಿಶ್ರ ಕೇಸರಿಯನ್ನು 16/1 ತೊಲ, 8/1 ತೊಲ, 4/1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ ಬೀದಿ ಜಿ.ಟಿ. ಮದರಾಸ್.

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ ಮೈಸೂರು

ಅಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ
4 ನೇ ಅಮೋಘ ವಾರ

ಪಗಲಿ ದುನಿಯಾ
(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್
ಜೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—

L. N. Press

Sriramp st MYSORE



ಐ.ಜೆ. ಹಾಲ್, ಸರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು.